ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ, ಪೊನ್ನಂಪೇಟೆ.

ಸಿ.ಸಿ. ನಂ. **993/2020** ಫಿರ್ಯಾ.ಸಾ – **3**
ಚಾ.ಸಾ – **3**

ದಿನಾಂಕಃ **07.07.2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | | |
|---|---|---|
| ಸಾಕ್ಷಿಯ ಹೆಸರು | : | ಸುಗಂದ ಬಿ ಎ |
| ತಂದೆಯ ಹೆಸರು | : | ಲೇಟ್ ಅಪ್ಪಚ್ಚ |
| ವಯಸ್ಸು | : | 44 ವರ್ಷ |
| ಉದ್ಯೋಗ | : | ಮುಖ್ಯ ಪೇದೆ |
| ವಾಸ ಸ್ಥಳ | : | ಪೊನ್ನಂಪೇಟೆ |

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-

ನಾನು 2019 ರಿಂದ 2024 ರ ತನಕ ಕುಟ್ಟ ಪೊ ಠಾಣೆಯಲ್ಲಿ ಪೊಲೀಸ್ ಪೇದೆ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 04.07.2020 ರಂದು ಸಂಜೆ 4.00 ರಲ್ಲಿ ನಾನು ಠಾಣೆಯಲ್ಲಿರುವಾಗ ಕುಟ್ಟ ಪೊಲೀಸ್ ವೃತ್ತ ನೀರಿಕ್ಷಕರು ದೂರವಾಣಿ ಕರೆ ಮಾಡಿ ಠಾಣಾ ಸರಹದ್ದಿಗೆ ಸೇರಿದ Faith estate ನವರು ಪೆರಿಯಾಸ್ವಾಮಿ ಎಂಬುವವರು ತನ್ನ ಆಟೋದಲ್ಲಿ ಕೆಎ 12 ಬಿ 8154 ನಲ್ಲಿ ಕಾನೂರು ಕಡೆಯಿಂದ ಚೂರು ಕಾಡು ಮುಖಾಂತರ ಚಂಬೊಕೊಲ್ಲಿ ಜಂಕ್ಷನ್ ಬಳಿ ಮದ್ಯವನ್ನು ಯಾವುದೇ ಪರವಾನಗಿ ಇಲ್ಲದೇ ಸಾಗಾಣೆ ಮಾಡುತ್ತಿದ್ದಾರೆ ಎಂದು ತಿಳಿಸಿದರು ಎಂದು ಮಾಹಿತಿ ಬಂದಿರುತ್ತದೆ. ಸಂಜೆ 4.10 ರಲ್ಲಿ ಪಂಚರಿಗೆ ತಿಳಿಸಿ, ಸ್ವ ವರದಿಯನ್ನು ಚಾಸಾ 1 ರವರು ತಯಾರಿಸಿರುತ್ತಾರೆ. ನಂತರ ಪಂಚರಾದ ಚಾಸಾ 5, 6 ಹಾಗೂ ಸಿಬ್ಬಂದಿಯಾದ ಚಾಸಾ 1, 3, 4, ರವರನ್ನು ಕರೆದುಕೊಂಡು ಬಾತ್ಮಿ ಬಂದ ಸ್ಥಳಕ್ಕೆ ಹೋಗಿ ರಸ್ತೆ ಬದಿ ನಿಂತಿದ್ದಾಗ ಒಂದು ಆಟೋ ಬಂದಿರುತ್ತದೆ. ಸದರಿ ಆಟೋವನ್ನು

ಪಂಚರು ಹಾಗೂ ಸಿಬ್ಬಂದಿ ನಿಲ್ಲಿಸಿದರು. ಅದನ್ನು ಪರೀಕ್ಷಿಸಿದಾಗ 3 card board box ಇದ್ದು ಅದರಲ್ಲಿ ಮಧ್ಯದ ಪ್ಯಾಕೆಟ್ ಇತ್ತು. ಆಟೋಚಾಲಕನ್ನು ವಿಚಾರಿಸಲಾಗಿ Faith estate ನವರು ಪೆರಿಯಾಸ್ವಾಮಿ ಎಂದು ತಿಳಿಸಿದರು. ಮದ್ಯ ಮಾರಾಟ ಮಾಡಲು ಪರವಾನಿಗೆ ಇದೆಯೇ ಎಂದು ಕೇಳಲಾಗಿ ಇಲ್ಲ ಎಂದು ತಿಳಿಸಿರುತ್ತಾರೆ. ಪಕ್ಕದಲ್ಲಿ ರಟ್ಟಿನ ಬಾಕ್ಸ್ ನಲ್ಲಿ 90 ML X 192 Original choice deluxe Brandy ಇತ್ತು, ಮತ್ತೊಂದು ಬಾಕ್ಸ್ ನಲ್ಲಿ 180 ML X 48 Original choice deluxe Brandy ಇತ್ತು ಪಂಚರ ಸಮಕ್ಷಮ ಅಮಾನತುಪಡಿಸಲಾಯಿತು. ಸ್ವತ್ತು, ಆಟೋ ಹಾಗೂ ಆರೋಪಿಯನ್ನು ಠಾಣೆಗೆ ಕರೆತರಲಾಯಿತು. ನಾನು ತನಿಖಾದಿಕಾರಿಗೆ ಹೇಳಿಕೆ ನೀಡಿರುತ್ತೇನೆ.

ಮಹಜರ್ ನ್ನು ಅನ್ನು ನೋಡಿ ನಿಪಿ 2 ಎಂದು ಈಗಾಗಲೇ ಗುರುತಿಸಿದ್ದು, ಸಾಕ್ಷಿ ಸಹಿಯನ್ನು ನಿಪಿ 2 ಬಿ ಎಂದು ಗುರುತಿಸಲಾಯಿತು. 3 ಫೋಟೊಗಳನ್ನು ನೋಡಿ ಗುರುತಿಸಿರುತ್ತಾರೆ. ಮು. ಮಾ 1 ಮತ್ತು 2 ಅನ್ನು ನೋಡಿ ಗುರುತಿಸಿರುತ್ತಾರೆ.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ. ಸಿ. ಪಿ ವಕೀಲರಿಂದಃ</u>

ಈ ಪ್ರಕರಣದಲ್ಲಿ ನಾನೇ ದೂರುದಾರ ಹಾಗೂ ನಾನೇ ತನಿಖಾಧಿಕಾರಿ ಎಂದರೆ ಸರಿ. ಠಾಣೆಗೆ ಸಾಕ್ಷಿದಾರರನ್ನು ಸಂಜೆ 04.10 ಕ್ಕೆ ಕರೆಸಿ, ಕರೆದುಕೊಂಡು ಹೋಗಿರುತ್ತೇನೆ. ಸ್ಥಳಕ್ಕೆ 04.45 ಕ್ಕೆ ಹೋಗಿರುತ್ತೇವೆ. ಸಿ ಪಿ ಐ ರವರಿಗೆ ಆರೋಪಿ ಬಗ್ಗೆ ಮಾಹಿತಿ ಗೊತ್ತಿರಬಹುದು. ಕೆ ಎಂ ಕೊಲ್ಲಿಯಲ್ಲಿ ಬಾರ್ ಇದೆ Faith estate D C ಬಾರ್ ಗೆ ಹೊಂದಿಕೊಂಡಂತೆ ಇದೆ ಎಂದರೆ ಸರಿ. ಆದಿನ ಆರೋಪಿ ವಾಹನವನ್ನು ಮಾತ್ರ ಪರಿಶೀಲಿಸಿದೆವು ಆರೋಪಿಯನ್ನು ವಿಚಾರಿಸಿದಾಗ

ಕಾನೂರಿನಿಂದ ಮದ್ಯವನ್ನು ತೆಗದುಕೊಂಡು ಬಂದಿರುವುದಾಗಿ ತಿಳಿಸಿದರು. ಆ ಸಮಯದಲ್ಲಿ ಕೋವಿಡ್ ಇದ್ದ ಕಾರಣ ದೇಶದಾದ್ಯಂತ ಎಲ್ಲ ವೈನ್ ಶಾಪ್ ಹಾಗೂ ರೆಸಾರ್ಟ್‌ಗಳು ಬಂದ್ ಆಗಿದ್ದವು ಎಂದರೆ ಸರಿ. ಸಾಮಾನ್ಯ ಜನರಿಗೆ ಆ ಸಮಯದಲ್ಲಿ ಮದ್ಯ ಸಿಗುತ್ತಿರಲಿಲ್ಲ ಎಂದರೆ ಪೊನ್ನಂಪೇಟೆ ವಾಪ್ತಿಯಲ್ಲಿ ನಿಗದಿತ ಸಮಯದಲ್ಲಿ ಅನುಮತಿ ನೀಡಿದ್ದರು ಎನ್ನುತ್ತಾರೆ. ನಾನು ಹೇಳಿದಂತೆ ಮದ್ಯ ಮಾರಾಟ ಮಾಡಲು ಯಾವ ಪ್ರದೇಶದಲ್ಲೂ ಅನುಮತಿ ನೀಡಿರಲಿಲ್ಲ. ಎಂದರೆ ಸರಿಯಲ್ಲ. Original chioce box ಆಗಿತ್ತು. ನ್ಯಾಯಾಲಯದ ಮಂದೆ ಇರುವ box Original chioce box ಅಲ್ಲ ಹಾಗೂ 3 box ಗಳು ಇಲ್ಲ ಎಂದರೆ ನಾವು 1 box ನ್ನು ಮಾತ್ರ ಅಮಾನತು ಪಡಿಸಿದೆವು ಉಳಿದ 2 box ಗಳನ್ನು ಠಾಣೆಯಲ್ಲಿ ಇಟ್ಟೆವು ಎನ್ನುತ್ತಾರೆ. ಸದರಿ 2 box Waste ಎಂದು ನಾವೇ ತೀರ್ಮಾನಿಸಿದೆವು. ಒಟ್ಟು 6 ಲೀ ಮದ್ಯವನ್ನು ಅಮಾನತುಪಸಿಡಿದೆವು. ಅಮಾನತುಪಸಿಡಿದೆವು ಎಂದು ಹೇಳುವ ಮದ್ಯವನ್ನು ಯಾವ ಅಂಗಡಿಯಿಂದ ತಂದರು ಎಂಬ ಬಗ್ಗೆ ತನಿಖೆ ಮಾಡಲಿಲ್ಲ ಎನ್ನುತ್ತಾರೆ. ಮದ್ಯದ ಪ್ಯಾಕೆಟ್ ಗಳನ್ನು box ನಲ್ಲಿ ಹಾಕಿ ರಾಸಾಯನಿಕ ಪರೀಕ್ಷೆಗಾಗಿ ಕಳುಹಿಸಿಸಲಾಯಿತು ಎನ್ನುತ್ತಾರೆ. ಮದ್ಯದ ಪ್ಯಾಕೆಟ್ ಗಳ ಬ್ಯಾಚ್ ನಂಬರ್ ಹಾಗೂ ಸೀರಿಯಲ್ ನಂಬರ್ ಪರೀಕ್ಷಿಸಿ ರಾಸಾಯನಿಕ ಪರೀಕ್ಷೆಗಾಗಿ ಕಳುಹಿಸಿರಬಹುದು ಎನ್ನುತ್ತಾರೆ. ನನ್ನ ಅಂತಿಮ ವರದಿಯಲ್ಲಿ ಮದ್ಯದ ಪ್ಯಾಕೆಟ್ ಗಳ ಬ್ಯಾಚ್ ನಂಬರ್ ಹಾಗೂ ಸೀರಿಯಲ್ ನಂಬರ್ ಇಲ್ಲ ಎಂದರೆ ಸರಿಯಲ್ಲ.

ಮು. ಮಾ ರೀತಿಯ ಪ್ಯಾಕೆಟ್ ಗಳು ಹಾಗೂ **box** ಎಲ್ಲ ಕಡೆ ಸಿಗುತ್ತವೆ ಎಂದರೆ ಸರಿ. ಆರೋಪಿಯ ಬಳಿ ಮು. ಮಾ ಗಳನ್ನು ಅಮಾನತುಪಸಿಡಿದೆವು ಎಂದು ಹೇಳಲು ನಿಖರ ಗುರುತು ಇಲ್ಲ ಎಂದರೆ ಸರಿಯಲ್ಲ. ಕುಟ್ಟ ಪೊ. ಠಾಣಾ ವ್ಯಾಪ್ತಿಯಲ್ಲಿ ಕೋವಿಡ್ ಸಮಯದಲ್ಲಿ ಹಲವಾರು ಪ್ರಕರಣಗಳು ದಾಖಲಾಗಿದೆ ಹಾಗೂ ಅದರಲ್ಲೂ ಸಹ ಇದೇ ರೀತಿ ಮು. ಮಾ ಗಳನ್ನು ಹಾಜರುಪಡಿಸಿದೆವು ಎಂದರೆ ಸರಿ. ನಾನು ಹೇಳಿದಂತೆ ಆ ದಿನ ಯಾವುದೇ ಮಧ್ಯವನ್ನು, ಆರೋಪಿಯನ್ನು ಅಮಾನತುಪಡಿಸಿಲ್ಲ ಎಂದರೆ ಸರಿಯಲ್ಲ. ಪಂಚರು ಸ್ಥಳಕ್ಕೆ ಬಂದಿಲ್ಲ, ಅವರಿಗೆ ಹೆದರಿಸಿ ಠಾಣೆಯಲ್ಲಿ ಸಹಿ ಪಡೆದಿದ್ದೇನೆ ಎಂದರೆ ಸರಿಯಲ್ಲ. ನಾನು ಅಮಾನತುಪಡಿಸಿದ ಕಾರಣ ನಿಖರವಾಗಿ ಸ್ಥಳವನ್ನು ಮಹಜರ್ ನಲ್ಲಿ ತೋರಿಸಿಲ್ಲ ಎಂದರೆ ಸರಿಯಲ್ಲ. ಕೆ. ಎಂ. ಕೊಲ್ಲಿ ಜಂಕ್ಷನ್ ಎಂಬುದು ಅರ್ಧ ಕಿ. ಮೀ ವ್ಯಾಪ್ತಿ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಸದರಿ ಜಂಕ್ಷನ್‌ನಲ್ಲಿ ಯಾವುದೇ ಅಗಂಡಿಗಳು ಇಲ್ಲ ಎನ್ನುತ್ತಾರೆ. ಸುತ್ತ ಮುತ್ತಲಿನ ತೋಟ ಹಾಗೂ ಮನೆಯವರನ್ನು ಸಾಕ್ಷಿದಾರರಾಗಲು ಕರೆದಿಲ್ಲ ಎಂದರೆ ಸರಿ. ಬೇರೆ ಪ್ರಕರಣದ ಮು. ಮಾ ಗಳನ್ನು ಹಾಜರುಪಸಡಿಸಿದ್ದೇವೆ ಎಂದರೆ ಸರಿಯಲ್ಲ. ನಾವು ಸ್ಥಳದಲ್ಲಿ ಆರೋಪಿ ಬಳಿಯಿಂದ ಮಧ್ಯವನ್ನು ಅಮಾನತುಪಸಿಡಿದ ಕಾರಣ **3** **box** ಗಳನ್ನು ಹಾಗೂ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಅಂಕಿಅಂಶಗಳಿಗಾಗಿ ಸುಳ್ಳು ಪ್ರಕರಣ ದಾಖಲಿಸಿ ಆರೋಪಿ ವಿರುದ್ಧ ಸುಳ್ಳು ದೂರು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಎಫ್. ಎಸ್. ಎಲ್ ವರದಿ ಈ ಪ್ರಕರಣಕ್ಕೆ ಸಂಬಂಧಿಸಿದ್ದಲ್ಲ, ಪ್ರಕರಣಕ್ಕಾಗಿ ಸೃಷ್ಟಿಸಿದ್ದೇವೆ

ಎಂದರೆ ಸರಿಯಲ್ಲ. ಈ ಪ್ರಕರಣಕ್ಕೂ, ಆರೋಪಿಗೂ, ಮು ಮಾ ಗಳಿಗೂ, ನನ್ನ ಸಾಕ್ಷ್ಯಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ಠಾಣೆಯಲ್ಲಿ ಸ್ಥಳಕ್ಕೆ ಹೋಗದೆ ಮಹಜರ್ ದಾಖಲೆ ತಯಾರಿಸಿದ್ದೇನೆ ಎಂದರೆ ಸರಿಯಲ್ಲ. ನಿ ಪಿ **6** ರಿಂದ **8** ಫೋಟೋಗಳನ್ನು ಠಾಣೆಯಲ್ಲಿ ತಯಾರಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)

Sd/xxx-
ಸಿವಿಲ್ ನ್ಯಾಯಾಧೀಶರು, ಪೊನ್ನಂಪೇಟೆ.